13.	ಡಿ. ಕರೀಗೌಡ, ಗ್ರಾ. ಪಂ. ಕಾರ್ಯದರ್ಶಿ, ಗರ್ಜೆ ಕಡೂರು ತಾ॥			ಇಲಾಖಾ ವಿಚಾರಣೆಗೆ ಅಧಿಕಾರಿಗಳನ್ನು ನೇಮಿಸಲಾಗಿದೆ. ಸೇವೆಯಿಂದ ನಿಲಂಭನಗೊಳಿಸಲಾಗಿದೆ.
14.	ಹನುಮಂತಪ್ಪ ಗ್ರಾ. ಪಂ. ಕಾರ್ಯದರ್ಶಿ, ಇಡಕಣಿ ಮೂಡಿಗೆರೆ ತಾ॥	2,00,00000		ಸೇವೆಯಿಂದ ನಿಲಂಭನಗೊಳಿಸಲಾಗಿದೆ.
15.	ಪಿ. ಎಸ್. ನಾರಾಯಣ್ ಲಕ್ಕವಳ್ಳಿ, ತರೀಕೆರೆ ತಾ॥		1,26,39400	ಸೇವೆಯಿಂದ ನಿಲಂಭನಗೊಳಿಸಲಾಗಿದೆ.
	ಒಟ್ಟು	7,13,52200	36,69,96800	

5765 (6649) ಶ್ರೀ ಧರ್ಮೇಗೌಡ ಎಸ್. ಎಲ್. (ಬೀರೂರು): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಸರ್ಕಾರದ ಮಹತ್ತರ ಯೋಜನೆಯಾದ ಅಕ್ಷರ ದಾಸೋಹ ಮಧ್ಯಾಹ್ನದ ಬಿಸಿಯೂಟದ ಕೇಂದ್ರಗಳನ್ನಾ ಸಂಖ್ಯೆ ಎಷ್ಟು;

ಆ) ಬೀರೂರು ಕ್ಷೇತ್ರದಲ್ಲಿ ಕುನ್ನಾಳು, ಹರೇಗೌಜ, ಲಕ್ಕಾ ಮೊದಲಾದೆಡೆ ಮಧ್ಯಾಹ್ನದ ಬಿಸಿಯೂಟದ ಕಾರ್ಯಕ್ರಮ ಸ್ಥಗಿತಗೊಂಡು, ಮಕ್ಕಳಿಗೆ ಅನ್ಯಾಯವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಬಂದಿದ್ದರೆ, ಆ ಕೇಂದ್ರಗಳ ಪುನರಾರಂಭಕ್ಕೆ ಏನು ಕ್ರಮ ಕೈಗೊಳ್ಳಲಾಗಿದೆ;

ಈ) ಜಿಲ್ಲೆಯಲ್ಲಿ ಈ ದಾಸೋಹದ ಅಡಿಗೆ ಕೋಣೆಗಳು ಎಷ್ಟಿದೆ ಹಾಗೂ ಕೊರತೆ ಎಷ್ಟಿದೆ;

ಉ) ಅವುಗಳನ್ನು ನಿರ್ಮಿಸಲು ಕೈಗೊಂಡಿರುವ ಕ್ರಮವೇನು?

ಶ್ರೀ ಆರ್. ರಾಮಲಿಂಗಾರೆಡ್ಡಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಚಿಕ್ಕಮಗಳೂರು ಜಿಲ್ಲೆಯಲ್ಲಿ 1421 ಬಿಸಿಯೂಟ ಅಡುಗೆ ಕೇಂದ್ರಗಳಿವೆ.

ಆ) ಬಂದಿದೆ.

ಇ)

- ಗ್ರಾಮಸ್ಥರ ಮತ್ತು ಸ್ತ್ರೀಶಕ್ತಿ ಸಂಘಗಳ ನಡುವಿನ ಜಿದ್ದಾ ಜಿದ್ದಿನಿಂದಾಗಿ ಸ್ಥಗಿತಗೊಂಡಿದೆ.
- 2004–05ರಲ್ಲಿ ತಹಶೀಲ್ದಾರ್ ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ತಾಲ್ಲೂಕು ಕ್ಷೇತ್ರ ಶಿಕ್ಷಣಾಧಿಕಾರಿ, ಸಹಾಯಕ ನಿರ್ದೇಶಕರು ಹಾಗೂ ಗ್ರಾಮ ವ್ಯಾಪ್ತಿಯ ಪೊಲೀಸ್ ನಿರೀಕ್ಷಕರು ಮತ್ತು ಕ್ಷೇತ್ರದ ಶಾಸಕರ ಸಮ್ಮುಖದಲ್ಲಿ ಸಭೆ ನಡೆಸಿ ಸೂಕ್ತ ಮಾರ್ಗದರ್ಶನ ನೀಡಿದಾಗಲೂ ಯಾವುದೇ ಒಮ್ಮತಕ್ಕೆ ಬಾರದಿದ್ದುದರಿಂದ ಸ್ಥಗಿತಗೊಂಡಿರುವುದು ಮುಂದುವರಿದಿದೆ.
- ದಿನಾಂಕ 13–07–2005ರಂದು ಸ್ಥಗಿತಗೊಂಡ ಕೇಂದ್ರಗಳ ಪುನರ್ ಸ್ಥಾಪನೆಗೆ ಸಂಬಂಧಿಸಿದ ಎಲ್ಲಾ ಸ್ತ್ರೀಶಕ್ತಿ ಸಂಘಗಳನ್ನು ಹಾಗೂ ಗ್ರಾಮ ಪಂಚಾಯಿತಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಮತ್ತು ಸದಸ್ಯರ ಸಭೆ ಕರೆದು ಸಂಬಂಧಿಸಿದ ತಾಲ್ಲೂಕು ಮಟ್ಟದ ಅಧಿಕಾರಿಗಳು ಹಾಜರಿದ್ದು, ಸಮಸ್ಯೆಯನ್ನು ಚರ್ಚಿಸಿ ಮಾರ್ಗಸೂಚಿಯ

ಎಲ್ಲ ನಿಯಮಗಳನ್ನು ತಿಳಿಸಿ, ಒಮ್ಮತದ ಒಪ್ಪಂದಕ್ಕೆ ಬರಲು ಕೇಳಿಕೊಳ್ಳಲಾಯಿತು.

- ಸ್ತ್ರೀಶಕ್ತಿ ಸಂಘಗಳು ಯಾವುದೇ ತೀರ್ಮಾನಕ್ಕೆ ಒಪ್ಪದೆ ಅಡಿಗೆ ಕಾರ್ಯಕ್ಕೆ ಅಡ್ಡಿಪಡಿಸುತ್ತಿರುವುದರಿಂದ ಮುಂದುವರಿದಿದೆ.
- ಗ್ರಾಮಸ್ಥರೊಂದಿಗೆ ಮತ್ತೊಮ್ಮೆ ಸಮಸ್ಯೆಯನ್ನು ಸಮಾಲೋಚಿಸಿ ಕಾರ್ಯಕ್ರಮ ಪುನರ್ ಪ್ರಾರಂಭಕ್ಕೆ ಯತ್ನಿಸಲಾಗುವುದು.

ಈ)ಜಿಲ್ಲೆಯಲ್ಲಿ 1421 ಅಡುಗೆ ಕೇಂದ್ರಗಳಿದ್ದು 546 ಅಡುಗೆ ಕೋಣೆಗಳು ಲಭ್ಯವಿದೆ. 350 ಅಡುಗೆ ಕೋಣೆಗಳು ವಿವಿಧ ನಿರ್ಮಾಣ ಹಂತದಲ್ಲಿದೆ 525 ಅಡುಗೆ ಕೋಣೆಗಳು ನಿರ್ಮಾಣವಾಗಬೇಕಾಗಿದೆ.

ಉ) 2005–06ನೇ ಸಾಲಿನಲ್ಲಿ 92 ಅಡುಗೆ ಕೋಣೆಗಳನ್ನು ನಿರ್ಮಾಣ ಮಾಡಲು ರೂ.46.00 ಲಕ್ಷಗಳನ್ನು (ಪ್ರತಿ ಕೋಣೆಗೆ ರೂ. 50,000 ನಂತೆ) ಬಿಡುಗಡೆ ಮಾಡಿದೆ.

- 433 ಅಡುಗೆ ಕೋಣೆಗಳ ನಿರ್ಮಾಣವು ಬಾಕಿ ಇದ್ದು, ಇವುಗಳನ್ನು

ನಿರ್ಮಿಸಲು ಕೆಳಕಂಡನಿಧಿಗಳಿಂದ ಹಣವನ್ನು ಕ್ರೋಢಿಕರಿಸಿಕೊಂಡು ಪೂರೈಸಲು ಸಂಬಂಧಿಸಿದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಿಗೆ ತಿಳಿಸಲಾಗಿದೆ.

- ಎಸ್. ಜಿ. ಆರ್. ವೈ.
- ಎಸ್. ಜೆ. ಎಸ್. ಆರ್. ವೈ.
- ಗ್ರಾಮ ಪಂಚಾಯತಿಗೆ ನೀಡಿದ ಮುಕ್ತ ನಿಧಿ
- ಗ್ರಾಮ ಪಂಚಾಯಿತಿಯ ಸ್ವಂತ ವರಮಾನ
- ಪ್ರಕೃತಿ ವಿಕೋಪ ಪಶ್ಯಮಸ್ತಕ ನಿಧಿ
- ಪಂಚಾಯಿತಿ ಕಟ್ಟಡ ನಿಧಿ. ಹಾಸ್ಟೆಲ್ ಮತ್ತು ಶಾಲೆಗಳ ಯೋಜನೆ
- 11ನೇ ಹಣಕಾಸು ಆಯೋಗ ಅನುದಾನ
- ಬರಪರಿಹಾರ ಕೂಲಿಗಾಗಿ ಕಾಳು ಯೋಜನೆ
- ರಾಷ್ಟ್ರೀಯ ಕೊಳಚೆ ಅಭಿವೃದ್ಧಿ ಕಾರ್ಯಕ್ರಮ
- ನಗರ ಕೂಲಿಗಾಗಿ ಕೆಲಸ ಕಾರ್ಯಕ್ರಮ

5766(6569)ಶ್ರೀ ದೊಡ್ಡನಗೌಡ ಗುಂಡನಗೌಡ ಪಾಟೀಲ್ (ಹುನಗುಂದ): ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ. ರಾಜ್ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಾಗಲಕೋಟೆ ಜಿಲ್ಲೆಯ ಹುನಗುಂದ, ರಾಯಚೂರು ಜಿಲ್ಲೆಯ ಲಿಂಗಸುಗೂರು ಮತ್ತು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಪ್ರತಿಯೊಂದು ಗ್ರಾಮ ಪಂಚಾಯ್ತಿಗಳಿಗೆ 2000–01ನೇ ಆರ್ಥಿಕ ಸಾಲಿನಿಂದ ಕಳೆದ ಆರ್ಥಿಕ ಸಾಲಿನವರೆಗೂ ಬಿಡುಗಡೆ ಮಾಡಿರುವ ಅನುದಾನದ ಮೊತ್ತವೆಷ್ಟು?

ಆ) ಯಾವ ಯಾವ ಉದ್ದೇಶಗಳಿಗೆ ಈ ಹಣವನ್ನು ಬಳಕೆ ಮಾಡಿಕೊಳ್ಳಲು ಸರ್ಕಾರ ಸೂಚಿಸಿದೆ.

ಇ) ಪ್ರತಿಯೊಂದು ಗ್ರಾಮ ಪಂಚಾಯ್ತಿಗೆ ಸರ್ಕಾರ 5.00 ಲಕ್ಷ ರೂ. ಗಳನ್ನು ಅನುದಾನವಾಗಿ ನೀಡುತ್ತಿದೆಯಲ್ಲವೆ;